ಗೆಳೆಯನೊಬ್ಬ ಊರು ಬಿಟ್ಟ ಗಳಿಗೆ
ಎಲ್ಲ ಗೆಳೆಯರೂ ಊರು ಬಿಟ್ಟಿರಬಹುದೆಂಬ ಬಡಪಾಯಿ ದುಗುಡ;
ಟೆಲಿಫೋನ್ ಡೈರಿಯ ಯಾವ ನಂಬರು ತಿರುಗಿಸಿದರೂ
ಅಲ್ಲಿ ಗೆಳೆಯರು ಸಿಗಲಾರರೆಂಬ ಕಳ್ಳ ಅಳುಕು ಒಸರುತ್ತಿತ್ತು;
ನಂಬರು ಸಿಕ್ಕಿದರೂ ಅಲ್ಲಿ ಗೆಳೆಯರಿರಲಾರರೆಂಬುದು ಖಾತ್ರಿಯಾಗಿತ್ತು.
ಮೂರು ಸಲ ಮೂವರಿಗೆ ಫೋನೆತ್ತಿ ಕೆಳಗಿಟ್ಟೆ;
ನಡುವೆ ಉತ್ತರವಿರಲಿಲ್ಲ.

ಅವತ್ತು ಊರು ಬಿಟ್ಟ ಗೆಳೆಯನಲ್ಲಿ
ಸಾಮಾನ್ಯವಾಗಿ ಪ್ರೀತಿಯಿತ್ತು; ಕಣ್ಣಲ್ಲಿ ಮೆಚ್ಚುಗೆಯಿತ್ತು
ಅಕಸ್ಮಾತ್ ಉಕ್ಕುವ ಪ್ರೀತಿಜಲ ಹೀರಿಕೊಳ್ಳುವ
ಬ್ಲಾಟಿಂಗ್ ಪೇಪರಿನಂಥ ಎದೆಯಿತ್ತು.
ಮಿಗಿಲಾಗಿ, ಅಲ್ಲಿ ದುಃಖವಿತ್ತು
ಉಡಾಫೆಯಿತ್ತು, ಅಲೆಮಾರಿಯ ಸೆಳೆತವಿತ್ತು.

ಅವನು ಎಲ್ಲೋ ಹೋಗುತ್ತಿದ್ದ, ಎಲ್ಲೋ ಬರುತ್ತಿದ್ದ
ಅವನ ಸಣ್ಣಗಿನ ಸಿಡಿಮಿಡಿ ವಿಸ್ಮಯ ಹುಟ್ಟಿಸುತ್ತಿತ್ತು
ಅಲ್ಲಿ ಸಣ್ಣತನ ಕೊಂಚ ಕಡಿಮೆಯಿತ್ತು
ರಾತ್ರಿ ಗುಂಡಿನ ಕರೆಗೆ ಅವನ ಇಡೀ ಮೈ ಹೂಂಗುಡುತ್ತಿತ್ತು
ಆಗ ಸಡಿಲಾಗುತ್ತಿದ್ದ ನಾಲಗೆಯಲ್ಲಿ ಆಸೆಯಿತ್ತು, ಭರವಸೆಯಿತ್ತು
ಗಂಟಲು ಗಿಲಿಗಿಲಿಗುಡುತ್ತಿತ್ತು
ಅಪ್ಪಂಥವರು ಸಿಕ್ಕರೆ ಅದು ಗುಡುಗುತ್ತಲೂ ಇತ್ತು.

ಮಾತುಮಾತಿಗೆ ಸುಮ್ಮನೆ ತೂಗುವ ಆ ಕತ್ತು ನನಗೆ ಪ್ರಿಯವಾಗಿತ್ತೆ?
ವಿಧೇಯ ಮುಖ ಹುಡುಕುತ್ತಿದ್ದ ನನ್ನ ಮನ ತುಂಬಿ ಬಂದಿತ್ತೆ?
ಇದ್ದರೂ ಇರಬಹುದು!

ಊರು ಬಿಟ್ಟ ಗೆಳೆಯನ ಬಗ್ಗೆ ಚರಮಗೀತೆ ಬರೆಯುವುದೇ?
ಅಗಲುವುದೆಂದರೆ ಹಾಗೆಯೇ ತಾನೆ?
ಎಲ್ಲೋ ದೂರದಲ್ಲಿರುವ ಗೆಳೆಯ ಇನ್ನು ಅತ್ತತ್ತಲೇ ಅಲ್ಲವೆ?
ಹೋದವನು ಬರುತ್ತಾನೆ, ಬಂದು ಹೋಗುತ್ತಾನೆ; ಅದೆಲ್ಲ ಸರಿ,
ಅಂದು ಬಿಟ್ಟುಹೋದ ದುಗುಡ ಮಾತ್ರ ಹಾಗೇ ಇದೆ ಎಲ್ಲೋ ಒಳಗೆ...

ಅಂದು ಊರುಬಿಟ್ಟ ಗೆಳೆಯ ಕೊನೆಗೂ ಒಂದು ದಿನ ಬಂದ;
ಬಂದದ್ದು ವಿಷ ಕುಡಿದು ಜೀವ ಬಿಟ್ಟ ಸುದ್ದಿಯಾಗಿ...

(2004–2012ರ ನಡುವೆ)

● **ನಟರಾಜ್ ಹುಳಿಯಾರ್**

